# ಆಸಕ್ತಿಯ ಪ್ರತಿಬಿಂಬ ಟ್ಯಾಟೂ

**ಇದು ಟ್ಯಾಟೂ ಕಾಲ. ಫ್ಯಾಷನ್‌ಗೆ ತಕ್ಕಂತೆ ಕಾಲಕಾಲಕ್ಕೆ ಟ್ಯಾಟೂ ವಿನ್ಯಾಸಗಳು ಬದಲಾಗುತ್ತವೆ. ದೇಹಾಲಂಕಾರದ ಭಾಗವಾಗಿರುವ ಟ್ಯಾಟೂ, ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ. ಆತ್ಮೀಯ ವ್ಯಕ್ತಿಗಳು, ಸನ್ನಿವೇಶಗಳನ್ನು ಕೊನೆಯವರೆಗೂ ಕಾಪಿಟ್ಟುಕೊಳ್ಳಲು ಟ್ಯಾಟೂ ಬಳಕೆಯಾಗುತ್ತಿದೆ. ಥೀಮ್ ಓರಿಯಂಟೆಡ್ ಟ್ಯಾಟೂಗಳು ಕೊರೊನಾ ಕಾಲದಲ್ಲೂ ವಿಜೃಂಭಿಸುತ್ತಿವೆ.**

■ ವಿದ್ಯಾಶ್ರೀ ಎಸ್.



ಫ್ಯಾಷನ್‌ಪ್ರಪಂಚದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಟ್ಯಾಟೂಗಳು ಯುವಜನರ ಆಕರ್ಷಣೆ. ಕೊರೊನಾ ಕಾಲದಲ್ಲಿ ಟ್ಯಾಟೂ ವಿಭಿನ್ನ ಅವತಾರ ತಾಳಿ, ಥೀಮ್ ಓರಿಯಂಟೆಡ್ ಟ್ಯೂಟೂಗಳು ಯುವಜನರನ್ನು ಸೆಳೆಯುತ್ತಿವೆ.

ಆತ್ಮೀಯರು, ಪ್ರೀತಿಪಾತ್ರರು, ಗೌರವಿಸುವ ವ್ಯಕ್ತಿಗಳು, ಇಷ್ಟದ ಸನ್ನಿವೇಶ, ಸ್ವ ಅನುಭವ... ಹೀಗೆ ಜೀವನದ ಅಮೂಲ್ಯ ಕ್ಷಣಗಳನ್ನು ದೇಹದ ಮೇಲೆಯೇ ಚಿತ್ರಿಸುವ ಟ್ಯಾಟೂ (ಹಚ್ಚೆ) ಸೆಳೆತ ಇಂದು ನಿನ್ನೆಯದಲ್ಲ. ಕಲಾವಿದ ಕೈಯಲ್ಲಿ ಇದು ನಾವೀನ್ಯತೆಯನ್ನು ಪಡೆಯುತ್ತಲೇ ಇದೆ.

ಟ್ಯಾಟೂ ಹಾಕಿಸಿಕೊಳ್ಳುವುದೆಂದರೆ ಸುಲಭದ ಮಾತಲ್ಲ. ನೋವು ತಡೆದುಕೊಳ್ಳುವ ಶಕ್ತಿಯ ಜೊತೆಗೆ ಅಭಿವ್ಯಕ್ತಿಯನ್ನೇ ಪ್ರತಿಬಿಂಬಿಸುವ ಚಿತ್ರವನ್ನು ದೇಹದ ಮೇಲೆ ಚಿತ್ರಿಸಬೇಕೆಂದರೆ ಧೈರ್ಯವೂ ಬೇಕು. ಆದರೆ, ಹಚ್ಚೆಯ ಮೇಲಿನ ಹುಚ್ಚು ಪ್ರೀತಿ, ನೋವುಗಳನ್ನು ತಡೆಯುವ ಶಕ್ತಿಯೂ ನೀಡುತ್ತದೆ.

ಟ್ಯಾಟೂಗಳಲ್ಲಿ ಹಲವು ಬಗೆಗಳಿವೆ. ಚಿಕ್ಕ–ಚೊಕ್ಕದಾದ ಟ್ಯಾಟೂಗಳ ಜೊತೆಗೆ ದೇಹವಿಡೀ ರಾರಾಜಿಸುವಂತಹ ವಿನ್ಯಾಸಗಳನ್ನು ನೋಡಬಹುದು. ಇದು ವ್ಯಕ್ತಿಯ ಆಯ್ಕೆಯ ಮೇಲೆ ಅವಲಂಬಿತವಾಗಿರುತ್ತದೆ. ಕೋವಿಡ್–19 ಕೂಡ ಹಲವು ಟ್ಯಾಟೂ ವಿನ್ಯಾಸಗಳು ಪ್ರಚುರತೆ ಪಡೆಯಲು ಕಾರಣವಾಗಿರುವುದು ವಿಶೇಷ.

### ಥೀಮ್ ಓರಿಯಂಟೆಡ್

ಒಂದು ನಿರ್ದಿಷ್ಟ ವಿಷಯವನ್ನು ಇಟ್ಟುಕೊಂಡು ಚಿತ್ರಿಸುವ ವಿನ್ಯಾಸವಿದು. ಇದರಲ್ಲಿ ಜಿಯೋಮೆಟ್ರಿಕ್, ಪೋರ್ಟ್ರೇಟ್, ಸಾಂಪ್ರದಾಯಿಕ ಶೈಲಿಗಳೆಂಬ ಮೂರು ಬಗೆಗಳಿವೆ.

### ಇಷ್ಟದವರ ನೆನಪಿನಲ್ಲಿ...

ಕುಟುಂಬ ಎಂದಾಕ್ಷಣ ಪ್ರತಿಯೊಬ್ಬರಿಗೂ ಸೆಳೆತವಿರುತ್ತದೆ. ಮನೆಯಲ್ಲಿರುವ ಪ್ರೀತಿ ಪಾತ್ರರ ಯಾವುದೋ ನಿರ್ದಿಷ್ಟ ಸನ್ನಿವೇಶವನ್ನು ಚಿತ್ರಿಸಬಹುದು. ಕುಟುಂಬಕ್ಕಷ್ಟೇ ಇದು ಸೀಮಿತವಾಗಿಲ್ಲ. ಪ್ರಕೃತಿ, ಇಷ್ಟದ ಟಿವಿ ಶೋ ಅಥವಾ ಯಾವುದೇ ಒಂದು ಘಟನೆಯೂ ಇರಬಹುದು. ಕಳೆದುಹೋದ ಪ್ರೀತಿ ಪಾತ್ರರು, ಕಾಲೇಜಿನ ನೆನಪುಗಳು ಹೀಗೆ.. ಸದಾ ನೆನಪಿನಲ್ಲಿ ಇರಬೇಕೆಂಬ ವಸ್ತು, ಸನ್ನಿವೇಶಗಳನ್ನು ದೇಹದಲ್ಲಿ ಚಿತ್ರಿಸುವ ಮೂಲಕ ಭದ್ರವಾಗಿ ಕಾಪಿಟ್ಟುಕೊಳ್ಳಬಹುದು. ಇಷ್ಟದ ಬಣ್ಣಗಳಲ್ಲಿ ವಿನ್ಯಾಸಗೊಳಿಸುವ ಮೂಲಕ ಇನ್ನಷ್ಟು ಆಕರ್ಷಣೀಯಗೊಳಿಸಬಹುದು.

### ಸಾಂಪ್ರದಾಯಿಕ ಶೈಲಿಯ ಮಹತ್ವ

'ಓಲ್ಡ್ ಈಸ್ ಗೋಲ್ಡ್' ಎನ್ನುವ ನಾಣ್ಣುಡಿಯಂತೆ ಸಾಂಪ್ರದಾಯಿಕ ಶೈಲಿಯೂ ಎಂದಿಗೂ ಕಳೆಗುಂದುವುದಿಲ್ಲ. ದಪ್ಪ ರೇಖೆ, ಪ್ರಕಾಶಮಾನವಾದ ಬಣ್ಣಗಳು ಈ ಶೈಲಿಯಲ್ಲಿ ಬಳಸಲಾಗುತ್ತದೆ. ಟ್ಯಾಟೂ ಅದ್ದೂರಿಯಾಗಿ